ಊ) 60 : 40 ಪ್ರಮಾಣದಲ್ಲಿ ಕೆಲಸಗಳು ಮಂಜೂರಾತಿ ಪಡೆದಿವೆಯೆ;

ಋ) ಹಾಸನ ತಾಲ್ಲೂಕಿನ ದುದ್ದ ಮಂಡಲವು ಕ್ರಿಯಾಶೀಲ ಯೋಜನೆಯಲ್ಲಿ ತೆಗೆದುಕೊಂಡಿರುವ ಕೆಲಸಗಳು ನಿಯಮಾವಳಿಗನುಸಾರವಾಗಿ ಇದೆಯೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಹಾಸನ ಜಿಲ್ಲೆಯ ಮಂಡಲ ಪಂಚಾಯತಿಗಳಿಗೆ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ 1993-94ನೇ ಸಾಲಿನ ದಿನಾಂಕ 31-7-1993ರವರೆಗೆ ಒದಗಿಸಲಾದ ಹಣ ರೂ. 94.76 ಲಕ್ಷಗಳು

ದಿನಾಂಕ 31-7-1993ರವರೆಗೆ ಬಿಡುಗಡೆಯಾದ ಹಣ ರೂ. 94.76 ಲಕ್ಷಗಳು ಮತ್ತು ಖರ್ಚಾದ ಹಣ ರೂ. 29.535.

ಎಲ್ಲಾ ಮಂಡಲಪಂಚಾಯತ್‌ಗಳ ಕ್ರಿಯಾ ಯೋಜನೆಗಳಿಗೆ ಜೂನ್ 93 ಮತ್ತು ಜುಲೈ 93ರಲ್ಲಿ ಜೆ.ಆರ್.ವೈ. ನಿಯಮಾವಳಿಗಳನ್ನು ಅನುಸರಿಸಿ ಅನುಮೋದನೆ ನೀಡಲಾಗಿದೆ.

1. ಕೂಲಿ ಭಾಗ ಶೇ. 60ರಷ್ಟು ಮತ್ತು ಸಾಮಗ್ರಿ ಭಾಗ ಶೇ. 40ರಷ್ಟು ಇರುವುದು ಕಡ್ಡಾಯ;

2. ಮಂಡಲಪಂಚಾಯ್ತಿಗಳು ಅವರ ಯೋಜನೆಗಳಿಗೆ ಅವರೇ ಅನುಮೋದನೆ ನೀಡಲು ಸೂಕ್ತ ಪ್ರಾಧಿಕಾರವಾಗಿರುತ್ತೆ.

3. ಹಳ್ಳಿಯ ಬಡತನ ರೇಖೆಗಿಂತ ಕೆಳಗಿರುವವರ ಹಿತದೃಷ್ಟಿಯಿಂದ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು;

4. ಪಜಾ : ಪವಗಳಿಗಾಗಿ ಶೇ. 22.5ರಷ್ಟನ್ನು ಕಡ್ಡಾಯವಾಗಿ ಮೀಸಲಿರಿಸಬೇಕು;

5. ತಾಂತ್ರಿಕವಲ್ಲದ ದಿನಗೂಲಿಗಾರರಿಗೆ ಕನಿಷ್ಟ ವೇತನ ರೂ. 16ನ್ನು ಕಡ್ಡಾಯ ಪಾವತಿಸಬೇಕಾಗುವುದು;

ಹಾಸನ ಜಿಲ್ಲೆಯಲ್ಲಿ ಗ್ರಾಮ ಸಭೆಗಳನ್ನು ಎಲ್ಲಾ ಮಂಡಲಪಂಚಾಯತಿಗಳಲ್ಲಿ ನಡೆಸಲಾಗಿದ್ದು, ಗ್ರಾಮಸ್ಥರ ಬೇಡಿಕೆಗಳಂತೆ ಕ್ರಿಯಾ ಯೋಜನೆಗಳನ್ನು ಅನುಮೋದಿಸಿದೆ.

ಈ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಕ್ರಿಯಾಶೀಲ ಯೋಜನೆಯನ್ನು ಅನುಮೋದಿಸಿದೆ.

ಹೌದು

ವಿಷಯ : -ತಾಳೆ ಎಣ್ಣೆ ಗಿಡಗಳಿಂದ ತಾಳೆ ಎಣ್ಣೆ ತೆಗೆಯುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 365(491)

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ)

ಮಾನ್ಯ ತೋಟಗಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ತೋಟಗಾರಿಕಾ ಇಲಾಖೆ ಸಹಕಾರದೊಂದಿಗೆ ತಾಳೆಎಣ್ಣೆ ಗಿಡಗಳನ್ನು ಬೆಳೆದಿರುವುದು ಹಾಗೂ ಈಗಾಗಲೇ ತಾಳೆಎಣ್ಣೆ ಕಾಯಿ ಇಳುವರಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಇದನ್ನು ಆರೆದು ಎಣ್ಣೆ ತೆಗೆದು ಪ್ಯಾಕ್ ಮಾಡಿ ಮಾರಾಟ ಮಾಡಲು

ಬೇಕಾಗುವ ಕಾಲಾವಧಿ ಎಷ್ಟು?

ಇ) ಈಗಾಗಲೇ ಫಲವಾಗಿರುವ ತಾಳೆ ಗಿಡಗಳನ್ನು ಬೆಳೆದಿರುವ ರೈತರಿಗೆ ಆಗುವ ತೊಂದರೆಯನ್ನು ತಪ್ಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎ.ಕೃಷ್ಣಪ್ಪ (ತೋಟಗಾರಿಕೆ ರಾಜ್ಯಸಚಿವರು)

ಹೌದು.

ಈ ಉದ್ದೇಶಕ್ಕಾಗಿ ಈಗಾಗಲೇ ಸ್ಥಾಪಿಸಿರುವ ತಾಳೆ ಸಂಸ್ಕರಣಾ ಘಟಕವು ಎಣ್ಣೆ ಆರೆಯಲು ಪ್ರಾರಂಭ ಮಾಡಿದೆ.

ಎಣ್ಣೆಯನ್ನು ತೆಗೆಯಲು ಈಗಾಗಲೇ ಪ್ರಾರಂಭಿಸಿರುವುದರಿಂದ ರೈತರಿಗೆ ತೊಂದರೆಯಾಗುವುದಿಲ್ಲ.

ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 21 ರೈತರಿಂದ ಒಟ್ಟು 891 ಕೆ.ಜಿ. ತಾಳೆ ಕಾಯಿಗಳನ್ನು ಇದುವರೆಗೆ ಕೊಳ್ಳಲಾಗಿದೆ. ಪ್ರತಿ ಟನ್ನಿಗೆ ರೂ.1800 ದರದಂತೆ ಒಟ್ಟು ರೂ.1525-80 ರೂಪಾಯಿಗಳನ್ನು ಚೆಕ್ ಮೂಲಕ ಪಾವತಿಸಲಾಗಿದೆ. ಪಾವತಿಯನ್ನು ಒಡಂಬಡಿಕೆಯಲ್ಲಿ ನಿಗದಿಪಡಿಸಿದಂತೆ 7 ದಿವಸಗಳ ಅವಧಿಯಲ್ಲಿ ಮಾಡಲಾಗಿದೆ. ಹೀಗೆ ಕೊಂಡ ತಾಳೆಕಾಯಿಂದ ಒಟ್ಟು 220 ಕೆ.ಜಿ. ತಾಳೆ ಎಣ್ಣೆಯನ್ನು ಉತ್ಪಾದಿಸಲಾಗಿದೆ.

ವಿಷಯ : – ಬಗರ್ ಹುಕುಂ ಜಮೀನನ್ನು ಸಕ್ರಮಗೊಳಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 366(489)

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಗರ್‌ಹುಕುಂ ಜಮೀನು ಸಕ್ರಮಗೊಳಿಸುವ ಬಿಡುಗಡೆಗೆ ವಿನಾಯ್ತಿಪಡಿಸಿರುವ ಜಮೀನನ್ನು ಬಿಟ್ಟು ಬೇರೆ ಜಮೀನನ್ನು ಉಳುವಾಗ ಅಂತಹ ಇತರೆ ಭೂಮಿ ಎಂದಿರುವುದರಿಂದ ಸರ್ಕಾರಿ ಯಾವುದೇ ರೀತಿಯ ಖರಾಬು ಮಂಜೂರಾಗದೆ ಉಳಿದಿರುವುದು ಹಾಗೂ ಉಪವಿಭಾಗಾಧಿಕಾರಿಗಳು ಈ ಬಗ್ಗೆ ತಕರಾರು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಆ) ಇದರ ಜೊತೆಗೆ ಸೇಂದಿವನ ಅನುಪಯುಕ್ತವಾಗಿದ್ದು, ಅದರ ಮೇಲೆ ಈಗಾಗಲೇ ಹಿಡುವಳಿ ಸ್ಥಾಪಿಸಿದ್ದು, ಕೆಲಕಡೆ ಭಾಗಾಯ್ತು, ತರಿ ಕೂಡ ಆಗಿರುವುದು, ಗೊತ್ತಿದ್ದೂ ಕೂಡ ಅದರ ಜಮೀನನ್ನು ಬಗರ್ ಹುಕುಂ ವ್ಯಾಪ್ತಿಯಿಂದ ಆಚೆ ಇಡಲು ಕಾರಣವೇನು :

ಇ) ಇಂತಹ ಜಮೀನುಗಳನ್ನು ಸಕ್ರಮ ಮಾಡಲು ಅವಕಾಶ ಇಲ್ಲದಿದ್ದಲ್ಲಿ ಬಗರ್ ಹುಕುಂ ಸಮಿತಿ ಮಾಡಿ, ಪ್ರಚಾರ ಮಾಡುವ ಅರ್ಥವಾದರೂ ಏನು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಮಂತ್ರಿಗಳು)

ಪುಟ್ ಖರಾಬ್, ಖರಾಬ್ ಹಳ್ಳ, ಸೇಂದಿವನ, ಗುಂಡುತೋಪು, ಕೆರೆ ಅಂಗಳ ಇಂತಹವುಗಳನ್ನು ನಿರ್ದಿಷ್ಟ ಉದ್ದೇಶಗಳಿಗೆ ಕಾಯ್ದಿರಿಸಲಾಗಿದ್ದು, ಇಂತಹ ಜಮೀನುಗಳನ್ನು ಮಂಜೂರು ಮಾಡಲು ರಹವಿರುವುದಿಲ್ಲ. ಇಂತಹ ಜಮೀನುಗಳಲ್ಲಿನ ಅನಧಿಕೃತ ಸಾಗುವಳಿಯನ್ನು ಸಮಿತಿಗಳಲ್ಲಿ ಸಕ್ರಮಗೊಳಿಸಲು ಬರುವುದಿಲ್ಲ.